**ದಿಃ 21-10-2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2** ನೇ ಎದುರುದಾರ ಪರ ವಕೀಲರಾದ ಶ್ರೀ ಎನ್ ವಿ ಆರ್ ರವರಿಂದ

ಈ ಪ್ರಕರಣದಲ್ಲಿ ನನ್ನ ಮಾಹಿತಿ ಮೇರೆಗೆ ಈ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ದಿಃ18-01-2021 ರಿಂದ 21-01-2021 ರ ವರೆಗೆ ನಾನು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ. ಸಾಕ್ಷಿ ಮುನ್ನುಡಿದು ತಾನು ದಿಃ03-03-2021 ರಿಂದ 04-03-2021 ರ ವರೆಗೆ ಕೂಡಾ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ ಅಂತ ನುಡಿಯುತ್ತಾರೆ. ಆ ಸಮಯದಲ್ಲಿ ನಾನು ವ್ಯಾಯಾಮ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ದಿಃ29-08-2022 ರ ವರೆಗೆ ನಾನು ನನ್ನ ಚಿಕಿತ್ಸೆಗೆ ಸಂಬಂಧಪಟ್ಟಂತೆ ಔಷಧಿಗಳನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿ. ನಾನು ಒಟ್ಟು 10 ದಿನ ಎರಡು ಬಾರಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನನಗೆ ಈ ಅಪಘಾತದಿಂದ ಎರಡೂ ತೊಡೆಗಳ ಮೂಳೆಗಳಿಗೆ, ಸೊಂಟದ ಮೂಳೆ ಮತ್ತು ಮುಖಕ್ಕೆ ಪೆಟ್ಟಾಗಿತ್ತು ಎಂದರೆ ಸರಿ. ನಾನು ಮುಖಕ್ಕೆ ಸಂಬಂಧಪಟ್ಟ ಚಿಕಿತ್ಸೆಯನ್ನು ಮಣಿಪಾಲ ಆಸ್ಪತ್ರೆಯಲ್ಲಿ ಪಡೆದುಕೊಂಡಿದ್ದು, ಅದು ಸಂಪೂರ್ಣವಾಗಿ ಗುಣವಾಗಿದೆ ಎಂದರೆ ಸಾಕ್ಷಿ ಸರಿ ಅಲ್ಲಾ ಅಂತ ನುಡಿಯುತ್ತಾರೆ. ನನಗೆ ಆದ ಗಾಯಗಳಿಗೆ ಅತ್ಯುತ್ತಮವಾದ ಚಿಕಿತ್ಸೆ ಪಡೆದುಕೊಂಡಿದ್ದೇನೆ ಎಂದರೆ ಸರಿ. ಮತ್ತು ನನ್ನ ತೊಡೆಯ ಮೂಳೆಗಳು ಸರಿಯಾಗಿ ಜೋಡಣೆಯಾಗಿರುತ್ತದೆ ಎಂದರೆ ಸಾಕ್ಷಿ ಮೂಳೆಗಳು ಜೋಡಣೆಯಾಗಿದೆ ಸರಿ ಆದರೆ ನನಗೆ ನಡೆದಾಡಲು ತೊಂದರೆ ಇದೆ ಮತ್ತು ಈಗಲೂ ನೋವು ಇದೆ ಅಂತ ನುಡಿಯುತ್ತಾರೆ. ವೈದ್ಯರು ಎರಡು ತಿಂಗಳವರೆಗೆ ನನಗೆ ಗಟ್ಟಿಯಾದ ಪದಾರ್ಥಗಳನ್ನು ತಿನ್ನಬಾರದು ಎಂದು ಸಲಹೆ ನೀಡಿದ್ದಾರೆ ಎಂದರೆ ಸರಿ. ಅದರ ನಂತರ ಸಾಮಾನ್ಯ ಆಹಾರವನ್ನು ಸೇವಿಸಲು ಸಲಹೆ ನೀಡಿದ್ದಾರೆ ಎಂದರೆ ಸರಿ. ನಿಪಿ-15 ರ ಪ್ರಕಾರ ನನಗೆ ನಡೆಯಲು ಯಾವುದೇ ಊರುಗೋಲು ಸಹಾಯದ ಅವಶ್ಯಕತೆ ಇಲ್ಲಾ ಎಂದರೆ ಸಾಕ್ಷಿ ತನಗೆ ಈಗಲೂ ಸಹಾ ನಡೆದಾಡಲು ತೊಂದರೆ ಇದೆ ಅಂತ ನುಡಿಯುತ್ತಾರೆ. ನಿಪಿ-15 ರಂತೆ ನನ್ನ ತೊಡೆಯ ಕ್ಷಕಿರಣ ತೆಗೆಸಿ ಪರೀಕ್ಷೆಗೆ ಒಳಪಡಿಸಿ ವೈದ್ಯರು ನ್ಯೂನ್ಯತಾ ಪ್ರಮಾಣ ಪತ್ರ ನೀಡಿದ್ದಾರೆ ಎಂದರೆ ಸರಿ. ದಿಃ13-12-2022 ರ ನಂತರ ನಾನು ಯಾವತ್ತೂ ಯಾವುದೇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಮತ್ತು ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ

ಸಾಕ್ಷಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿಲ್ಲ ಆದರೆ ಹೊರರೋಗಿಯಾಗಿ ತಪಾಸಣೆ ಮಾಡಿಕೊಂಡಿದ್ದೇನೆ ಅಂತ ನುಡಿಯುತ್ತಾರೆ. ಆ ಬಗ್ಗೆ ದಾಖಲೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲಾ. ನನ್ನ ದೇಹದಲ್ಲಿ ಒಳ ಸಾಧನ ಇದ್ದ ಬಗ್ಗೆ ದಾಖಲಾತಿ ಮತ್ತು ಸಾಕ್ಷಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲಾ. ನನ್ನ ದೇಹದಲ್ಲಿ ಒಳ ಸಾಧನ ಇಲ್ಲಾ ಎಂದರೆ ಸಾಕ್ಷಿ ಸರಿ ಅಲ್ಲಾ ನನ್ನ ಎರಡೂ ಕಾಲುಗಳಲ್ಲಿ ಒಳ ಸಾಧನ ಇದೆ ಅಂತ ನುಡಿಯುತ್ತಾರೆ. ನಾನು ಈಗಾಗಲೇ ಬೇರೆ ಆಸ್ಪತ್ರೆಯಲ್ಲಿ ಒಳ ಸಾಧನ ತೆಗೆಸಿಕೊಂಡಿದ್ದೇನೆ ಎಂದರೆ ಸರಿ ಅಲ್ಲಾ. ನನಗೆ ಆದ ಗಾಯಕ್ಕೆ ವ್ಯಾಯಾಮ ಚಿಕಿತ್ಸೆಯನ್ನು ವೈದ್ಯರು ನನಗೆ ಸೂಚಿಸಿದ್ದಾರೆ ಮತ್ತು ಅದನ್ನು ನಾನು ಸರಿಯಾಗಿ ಮಾಡುತ್ತಿದ್ದೇನೆ ಎಂದರೆ ಸರಿ. ವೈದ್ಯರು 3 ರಿಂದ 5 ಕಿ.ಮೀ. ದಿನಾ ನನಗೆ ನಡೆಯಲು ಸೂಚಿಸಿದ್ದಾರೆ ಎಂದರೆ ಸಾಕ್ಷಿ ಹೌದು ಆದರೆ ನನಗೆ ನಡೆಯಲು ತೊಂದರೆ ಇದೆ ಅಂತ ನುಡಿಯುತ್ತಾರೆ. ಅಪಘಾತದಿಂದ ನನ್ನ ಎರಡೂ ಕಾಲುಗಳ ಉದ್ದದಲ್ಲಿ ವ್ಯತ್ಯಾಸ ಕಂಡು ಬಂದಿಲ್ಲ ಎಂದರೆ ಸರಿ ಅಲ್ಲಾ.

ನಾನು ಐಟಿಐ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಿಪಿ-14 ಮತ್ತು 15 ರಲ್ಲಿ ಏನು ಬರೆಯಲಾಗಿದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇದೆ. ವೈದ್ಯರು ನನಗೆ ಮೌಖಿಕವಾಗಿ ನಾನು ಈ ಮೊದಲು ಮಾಡುತ್ತಿದ್ದ ಕೆಲಸ ಮಾಡಬಾರದು ಅಂತ ನನಗೆ ಸೂಚನೆ ನೀಡಿಲ್ಲ ಎಂದರೆ ಸಾಕ್ಷಿ ಸರಿ ಅಲ್ಲಾ ಅಂತ ನುಡಿಯುತ್ತಾರೆ. ಸಾಕ್ಷಿ ಅಪಘಾತದಿಂದ ಈ ಹಿಂದೆ ಮಾಡುತ್ತಿದ್ದಂತಹಾ ಕೆಲಸ ಮಾಡಲು ನನಗೆ ತೊಂದರೆ ಇದೆ ಅಂತ ನುಡಿಯುತ್ತಾರೆ. ನಿಪಿ-15 ರಲ್ಲಿ ನಾನು ಸಂಪೂರ್ಣವಾಗಿ ಗುಣಮುಖನಾಗಿದ್ದೇನೆ ಅಂತ ಕಾಣಿಸಿದ್ದಾರೆ ಎಂದರೆ ಸರಿ ಅಲ್ಲಾ. ಆಸ್ಪತ್ರೆಯವರು ನನಗೆ ಸರಿಯಾಗಿ ಚಿಕಿತ್ಸೆ ನೀಡಿ ನನ್ನ ಎರಡೂ ಕಾಲುಗಳಿಗೆ ಬಲ ಬರುವಂತಹಾ ಚಿಕಿತ್ಸೆ ಮತ್ತು ವ್ಯಾಯಾಮ ನೀಡಿದ್ದಾರೆ ಎಂದರೆ ಸಾಕ್ಷಿ ಹೌದು ಅಂತ ನುಡಿಯುತ್ತಾರೆ. ಸಾಕ್ಷಿ ಮುನ್ನುಡಿದು ಈಗಲೂ ಸಹಾ ನನ್ನ ಎರಡೂ ಕಾಲುಗಳಲ್ಲಿ ಮೊದಲಿನ ಶಕ್ತಿ ಬಂದಿಲ್ಲ ಅಂತ ನುಡಿಯುತ್ತಾರೆ. ನಿಪಿ-17 ಛಾಯಾಚಿತ್ರಗಳು ನಾನು ಚಿಕಿತ್ಸೆ ಪಡೆಯುತ್ತಿರುವಾಗ ತೆಗೆದಂತಹಾ ಛಾಯಾಚಿತ್ರಗಳು ಎಂದರೆ ಸರಿ. ನಾನು ಹಾಜರುಪಡಿಸಿದ ಔಷಧಿ ಬಿಲ್ಲುಗಳು ತೀರ್ಥಹಳ್ಳಿಯಲ್ಲಿದ್ದ ಫಾರ್ಮಸ್ಸಿಗಳದ್ದಾಗಿರುತ್ತದೆ ಎಂದರೆ ಸರಿ. ನಾನು ಸದ್ರಿ ಔಷಧಿ ಬಿಲ್ಲುಗಳನ್ನು ಹಲವಾರು ವೈದ್ಯರ ಸಲಹೆ ಪ್ರಕಾರ ಮತ್ತು ಸಲಹೆ

ಇಲ್ಲದೇ ಪಡೆದುಕೊಂಡಿದ್ದೇನೆ ಎಂದರೆ ಸರಿ ಅಲ್ಲಾ. ನಾನು ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರಿಂದ ನನಗೆ ಚಿಕಿತ್ಸೆ ನೀಡಿದ್ದ ವೈದ್ಯರು ಸೂಚಿಸಿದ್ದ ಔಷಧಿಗಳನ್ನು ಮಾತ್ರ ನಾನು ಪಡೆಯಬೇಕು ಅದಕ್ಕೆ ತಗಲುವ ಹಣಕ್ಕೆ ಮಾತ್ರ ನಾನು ಅರ್ಹನಿರುತ್ತೇನೆ ಎಂದರೆ ಸರಿ ಅಲ್ಲಾ. ನಾನು ತೀರ್ಥಹಳ್ಳಿಯಲ್ಲಿ ಪಡೆದುಕೊಂಡ ಔಷಧಿಗಳು ಬೇರೆ ಬೇರೆ ವೈದ್ಯರ ಸಲಹೆ ಪ್ರಕಾರ ಪಡೆದುಕೊಂಡಿದ್ದು, ಅದಕ್ಕೂ ಮತ್ತು ಈ ಅಪಘಾತ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿ ಅಲ್ಲಾ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನಾನು ತೀರ್ಥಹಳ್ಳಿಯಲ್ಲಿ ಔಷಧಿ ಅಂಗಡಿಗಳ ಸಹಾಯದಿಂದ ಔಷಧಿ ಬಿಲ್ಲುಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿ ಅಲ್ಲಾ.

ತೀರ್ಥಹಳ್ಳಿಯಿಂದ ಮಣಿಪಾಲಕ್ಕೆ **80** ಕಿ.ಮೀ. ಇದೆ ಎಂದರೆ ಸಾಕ್ಷಿ ಇರಬಹುದು ಅಂತ ನುಡಿಯುತ್ತಾರೆ. ಅಪಘಾತ ಸ್ಥಳದಿಂದ ಅಪಘಾತಪಡಿಸಿದ ವ್ಯಕ್ತಿಗಳೇ ನನ್ನನ್ನು ತೀರ್ಥಹಳ್ಳಿಯ ಜಯಚಾಮರಾಜ ತಾಲೂಕು ಆಸ್ಪತ್ರೆಗೆ ದಾಖಲಿಸಿ ಅಲ್ಲಿಂದ ಸರಕಾರಿ ಅಂಬುಲೆನ್ಸು **108** ರಲ್ಲಿ ನನ್ನನ್ನು ಮುಂದುವರಿದ ಚಿಕಿತ್ಸೆಗಾಗಿ ಮಣಿಪಾಲಕ್ಕೆ ಸೇರಿಸಲಾಗಿತ್ತು ಎಂದರೆ ಸಾಕ್ಷಿ ಸರಿ ಅಲ್ಲಾ ಅಂತ ನುಡಿಯುತ್ತಾರೆ. ನಾನು ಹಾಜರುಪಡಿಸಿದ ದಾಖಲಾತಿ ಪ್ರಕಾರ ಕೇವಲ **4** ಬಾರಿ ಮಾತ್ರ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ ಎಂದರೆ ಸರಿ ಅಲ್ಲಾ. ನಾನು ಕೇವಲ **5** ಬಾರಿ ಮಾತ್ರ ಮುಖಕ್ಕೆ ಸಂಬಂಧಪಟ್ಟಂತೆ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದೇನೆ ಎಂದರೆ ಸರಿ ಅಲ್ಲಾ. ನ್ಯೂನ್ಯತಾ ಪ್ರಮಾಣ ಪತ್ರ ಪಡೆದ ನಂತರ ಯಾವತ್ತಿಗೂ ನನಗೆ ಆದ ಗಾಯಕ್ಕೆ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿ ಅಲ್ಲಾ. ನಾನು ಹಾಜರುಪಡಿಸಿದ ದಾಖಲಾತಿ ಪ್ರಕಾರ ದಿಃ**08-10-2021** ರ ನಂತರ ನಾನು ಸಂಪೂರ್ಣವಾಗಿ ಮಣಮುಖನಾಗಿದ್ದು, ಕೇವಲ ನನಗೆ ಚಲಿಸಲು ಮಾತ್ರ ತೊಂದರೆ ಇತ್ತು ಎಂದರೆ ಸರಿ ಅಲ್ಲಾ. ನಾನು ಹಾಜರುಪಡಿಸಿದ ಬಿಲ್ಲುಗಳಲ್ಲಿ ದಿಃ**03-03-2022** ಮತ್ತು ದಿಃ**29-08-2022** ರ ಬಿಲ್ಲುಗಳು ನನ್ನ ವ್ಯಾಯಾಮ ಚಿಕಿತ್ಸೆ ಮತ್ತು ನ್ಯೂನ್ಯತಾ ಪ್ರಮಾಣ ಪತ್ರದ ಬಿಲ್ಲುಗಳು ಎಂದರೆ ಸರಿ ಅಲ್ಲಾ. ನಾನು ನನ್ನ ಚಿಕಿತ್ಸೆ ಕುರಿತು ಖಾಸಗಿ ವಾಹನದಲ್ಲಿ ಪ್ರಯಾಣ ಮಾಡಿದ ಬಗ್ಗೆ ಯಾವುದೇ ದಾಖಲಾತಿ ನೀಡಿಲ್ಲ ಎಂದರೆ ಸಾಕ್ಷಿ ಸರಿ ಅಲ್ಲಾ ಅಂತ ನುಡಿಯುತ್ತಾರೆ. ನಾನು

ಆಸ್ಪತ್ರೆಗೆ ಕೇವಲ ಬಸ್ಸಿನಲ್ಲಿ ಪ್ರಯಾಣ ಮಾಡಿದ್ದೇನೆ ಯಾವುದೇ ಖಾಸಗಿ ವಾಹನದಲ್ಲಿ ಪ್ರಯಾಣ ಮಾಡಿಲ್ಲ ಎಂದರೆ ಸರಿ ಅಲ್ಲಾ.

ನಾನು ಬಿ ಪಿ ಎಲ್ ಕಾರ್ಡು ಮತ್ತು ಆಧಾರ್ ಕಾರ್ಡು ಹೊಂದಿದ್ದೇನೆ ಎಂದರೆ ಸರಿ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲಾ. ನಾನು ಆಸ್ಪತ್ರೆಯಲ್ಲಿದ್ದಾಗ ನನ್ನ ಮನೆಯವರೇ ನನ್ನನ್ನು ನೋಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಸರಿ ಅಂತ ನುಡಿಯುತ್ತಾರೆ. ನನಗೆ ಸಹಾಯಕನಾಗಿ ನೇಮಿಸಿಕೊಂಡಂತಹಾ ವ್ಯಕ್ತಿಗಳಿಗೆ ನಾನು ಸಂಭಾವನೆ ನೀಡಿದ್ದ ಬಗ್ಗೆ ಯಾವುದೇ ದಾಖಲಾತಿ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ನಿಪಿ-11 ನನ್ನ ವೇತನ ಪ್ರಮಾಣ ಪತ್ರವನ್ನು ನಾನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿ ಅಲ್ಲಾ. ಸದ್ರಿ ದಾಖಲಾತಿ ನಾನು ಸೇಲ್ಸಮೆನ್ ಅಂತ ಕಾಣಿಸಿದ್ದು ಮೆಕ್ಯಾನಿಕ್ ಅಂತ ಕಾಣಿಸಿಲ್ಲ ಎಂದರೆ ಸರಿ ಅಲ್ಲಾ. ನನ್ನ ಆಸ್ಪತ್ರೆಯ ದಾಖಲಾತಿಯಲ್ಲಿ ಮತ್ತು ನಾನು ಹಾಜರುಪಡಿಸಿದ ನಿಪಿ-11 ರಲ್ಲಿ ನಾನು ಯಾವತ್ತೂ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದೆ ಎನ್ನುವ ಬಗ್ಗೆ ನಮೂದು ಇಲ್ಲಾ ಎಂದರೆ ಸಾಕ್ಷಿ ಸರಿ ಅಲ್ಲಾ ಅಂತ ನುಡಿಯುತ್ತಾರೆ. ನಾನು ಐಟಿಐ ಮೆಕ್ಯಾನಿಕ್ ಮಾಡಿದ್ದೇನೆ ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿಲ್ಲ ಆದರೆ ಹಾಜರುಪಡಿಸಲು ತೊಂದರೆ ಇಲ್ಲಾ. ನಾನು ವೃತ್ತಿಯಲ್ಲಿ ಮೆಕ್ಯಾನಿಕ್ ಆಗಿಲ್ಲ ಎಂದರೆ ಸರಿ ಅಲ್ಲಾ. ನಿಪಿ-11 ವೇತನ ಪ್ರಮಾಣ ಪತ್ರವನ್ನು ನನಗೆ ನೀಡಿದ ವ್ಯಕ್ತಿಯ ಸಾಕ್ಷಿ ಮಾಡಿಸಲು ನನಗೆ ಯಾವುದೇ ತೊಂದರೆ ಇಲ್ಲಾ. ನಿಪಿ-11 ರಂತೆ ನಾನು ವೇತನ ಪಡೆಯುತ್ತಿದ್ದ ಬಗ್ಗೆ ಬ್ಯಾಂಕಿನ ಯಾವುದೇ ಪಾಸು ಪುಸ್ತಕ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನಗೆ ನಿಪಿ-11 ರಲ್ಲಿ ಕಾಣಿಸಿದ ಹಣ ನಗದು ರೂಪದಲ್ಲಿ ಕೊಡುತ್ತಿದ್ದರು ಹಾಗಾಗಿ ನಾನು ಪಾಸ್ ಪುಸ್ತಕ ಹಾಜರುಪಡಿಸಿಲ್ಲ ಅಂತ ನುಡಿಯುತ್ತಾರೆ. ನಿಪಿ-11 ರಲ್ಲಿ ಕಾಣಿಸಿದ ಸಂಸ್ಥೆಯಲ್ಲಿ ನಾನು ಅಪಘಾತ ಪೂರ್ವದಲ್ಲಿ ಕೆಲಸ ಮಾಡುತ್ತಿದ್ದೆ ಮತ್ತು ಅದರಲ್ಲಿ ಕಾಣಿಸಿದಷ್ಟು ವೇತನ ಪಡೆಯುತ್ತಿದ್ದ ಬಗ್ಗೆ ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲಾ. ನಿಪಿ-11 ನ್ನು ನನಗೆ ನೀಡಿದ ವ್ಯಕ್ತಿ ಅವನು ಕೆಕೆ ಆಟೋ ಮೊಬೈಲ್ಸ ಪರವಾಗಿ ಸಹಿ ಮಾಡಿದ್ದಾನೆ ಆದರೆ ಅದರಲ್ಲಿ ಯಾವ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದ ಎನ್ನುವ ಬಗ್ಗೆ ಕಾಣಿಸಿಲ್ಲ ಎಂದರೆ ಸರಿ. ನಾನು ಅಪಘಾತದ ನಂತರ ಸದ್ರಿ ಕೆಕೆ ಆಟೋ

ಮೊಬೈಲ್ನನಲ್ಲಿ ಕೆಲಸ ಮಾಡುತ್ತಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಷ್ಟು ನನ್ನ ಔಷಧಿಗೆ, ಪ್ರಯಾಣಕ್ಕೆ, ಪೌಷ್ಠಿಕ ಆಹಾರಕ್ಕೆ ಮತ್ತು ಪರಿಚಾರಕರಿಗೆ ಖರ್ಚು ಮಾಡಿಲ್ಲ ಎಂದರೆ ಸರಿ ಅಲ್ಲಾ. ನಾನು ಅರ್ಜಿಯಲ್ಲಿ ಕೇಳಿದಷ್ಟು ಪರಿಹಾರ ಹಣ ಪಡೆಯಲು ನಾನು ಬದ್ಧನಾಗಿಲ್ಲ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**